ರಾಮಕೃಷ್ಣರು ಬರೆದ ಆ ಭವಿಷ್ಯವಾಣಿ ಎಲ್ಲರ ಕಣ್ಣೆದುರಿಗೂ ಸಾಕ್ಷಿಯಂತೆ ಇದೆ. ಅದರಲ್ಲಿ ಅವರು ಬಂಗಾಳಿಯಲ್ಲಿ ಹೀಗೆ ಬರೆದಿದ್ದಾರೆ: **"ಜಯ ರಾಧೇ ಪ್ರೇಮಮಯೀ ! ನರೇನ್ ಲೋಕಶಿಖ್ಖಾ ದೇಬೆ..."** – "ಪ್ರೇಮಮಯಿಯಾದ ರಾಧೆಗೆ ಜಯವಾಗಲಿ! ನರೇಂದ್ರ ಜಗತ್ತಿಗೆ ಉಪದೇಶ ನೀಡಲಿದ್ದಾನೆ." ಈ ಭವಿಷ್ಯವಾಣಿ ಈಗಾಗಲೇ ವಾಸ್ತವವಾಗಿದೆ. ಮುಂದಿನ ಶತಮಾನಗಳಲ್ಲಿ ಅದು ಇನ್ನೂ ಹೆಚ್ಚು ಸತ್ಯವಾಗಲಿದೆ. ಆದರೆ, ೧೮೮೪ನೇ ಇಸವಿಯಲ್ಲಿ, ಆ ಬಡಯುವಕ ನರೇಂದ್ರನನ್ನು ನೋಡುತ್ತಿದ್ದ ಯಾರಿಗಾದರೂ, ರಾಮಕೃಷ್ಣರ ಮಾತುಗಳಲ್ಲಿ ವಿಶ್ವಾಸ ಬರಲು ಸಾಧ್ಯವಿತ್ತೇನು?

**೩. ರಾಖಾಲ ಎಲ್ಲರ ನೇತಾರ:** ರಾಮಕೃಷ್ಣರ ಸಾಕ್ಷಾತ್ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಬ್ರಹ್ಮಾನಂದರ ಪೂರ್ವಾಶ್ರಮದ ಹೆಸರು ರಾಖಾಲ. ಶ್ರೀರಾಮಕೃಷ್ಣರ ಜೀವಿತಕಾಲದಲ್ಲಿ ರಾಖಾಲ ಓರ್ವ ಯುವಕರಾಗಿದ್ದರು. ಆದರೆ ರಾಮಕೃಷ್ಣರಿಗೆ ಆ ಯುವಕನಲ್ಲಿ ಅಪಾರ ವಿಶ್ವಾಸ. ರಾಖಾಲನಲ್ಲಿ ನೇತಾರನ ಗುಣಗಳನ್ನು ಅವರು ಕಂಡುಕೊಂಡಿದ್ದರು. ಅದಷ್ಟೇ ಅಲ್ಲ, ಇತರರಿಗೆ ರಾಖಾಲನನ್ನು ತಮ್ಮ ನಾಯಕನಂತೆ ಕಾಣುವಂತೆ ಹೇಳುತ್ತಿದ್ದರು. ಆ ಮಾತು ಸತ್ಯವಾಯಿತು ಎಂದು ಇತಿಹಾಸ ಸಾರಿ ತೋರಿಸುತ್ತಿದೆ. ಮುಂದೆ ರಾಮಕೃಷ್ಣ ಮಹಾಸಂಘದ ಪ್ರಥಮ ಅಧ್ಯಕ್ಷರಾಗಿ, ಅದಕ್ಕೆ ಭದ್ರ ತಳಪಾಯವನ್ನು ಹಾಕುವಲ್ಲಿ ಸ್ವಾಮಿ ಬ್ರಹ್ಮಾನಂದರ ಮಹತ್ವದ ಪಾತ್ರ ಎಲ್ಲರಿಗೂ ಗೊತ್ತಿದ್ದೇ.

**೪. ಪಂಡಿತೆ ರಮಾಬಾಯಿ:** ಪಂಡಿತೆ ರಮಾಬಾಯಿ ಒಬ್ಬ ಭಾರತೀಯ ಮಹಿಳೆ. ವಿಧವೆಯಾದ ನಂತರ ಇಂಗ್ಲಿಷ್ ಭಾಷೆಯನ್ನು ಕಲಿತು ಮೊದಲು ಲಂಡನ್ನಿಗೆ, ನಂತರ ಅಮೇರಿಕಾಗೆ ಹೋಗಿಬಂದರು. ಅನಂತರ ವಿಧವೆಯರ ಉದ್ಧಾರಕ್ಕಾಗಿ ಭಾರತದಲ್ಲಿ ಸಂಸ್ಥೆಯೊಂದನ್ನು ಪ್ರಾರಂಭಿಸಿದರು. ನಿಜ, ಇಲ್ಲಿಯವರೆಗೆ ಎಲ್ಲವೂ ಚೆನ್ನಾಗಿತ್ತು. ಆದರೆ ಆ ಸಂಸ್ಥೆಯ ಉದ್ದೇಶ 'ಸೇವೆ'ಯಾಗಿರಲಿಲ್ಲ, ಮತಾಂತರ. ರಮಾಬಾಯಿ ಕ್ರೈಸ್ತರಾಗಿದ್ದರು. ಉಚ್ಚ ಜಾತಿಯ ವಿಧವೆಯರ ಮತಾಂತರ ಮಾಡುತ್ತಿದ್ದರು. ಭಾರತೀಯ ಮಹಿಳೆಯರ ಮೇಲೆ ಆಗುತ್ತಿದ್ದ ಅತ್ಯಾಚಾರದ ವಿವರಣೆಗಳನ್ನು ವಿದೇಶಗಳಲ್ಲಿ ಬಣ್ಣಕಟ್ಟಿ ವಿಪರೀತವಾಗಿ ಬಣ್ಣಿಸುತ್ತಿದ್ದರು. ವಿದೇಶಗಳಲ್ಲಿ ಆಕೆ ಮಾಡುತ್ತಿದ್ದ ಪ್ರಚಾರ ಎಲ್ಲ ಎಲ್ಲೆಗಳನ್ನೂ ಮೀರಿಹೋಗಿತ್ತು. ವಿದೇಶೀಯರು ರಮಾಬಾಯಿ ಹೇಳುತ್ತಿದ್ದ ಕಥೆಗಳನ್ನು ಕೇಳಿ ಮನನೊಂದು, ಅನುಕಂಪದಿಂದ ಆಕೆಗೆ ಬಹಳಷ್ಟು ಹಣ ನೀಡುತ್ತಿದ್ದರು. ಆದರೆ ವಿವೇಕಾನಂದರು ಅಮೆರಿಕಾಗೆ ಹೋದಾಗ ಅಲ್ಲಿ ಭಾರತೀಯ ನಾರಿಯರ ಸ್ಪಷ್ಟ ಚಿತ್ರಣವನ್ನು ನೀಡುತ್ತಾರೆ; ವಾಸ್ತವ ಸ್ಥಿತಿಯನ್ನು ಹೇಳುತ್ತಾರೆ. ಈ ಮಾತುಗಳನ್ನು ಕೇಳಿ ವಿದೇಶೀಯರು ಬೆರಗಾಗಿ ಹೋಗುತ್ತಾರೆ. ರಮಾಬಾಯಿಯ ಅತಿಶಯೋಕ್ತಿಯ ಮಾತುಗಳನ್ನು ಕೇಳಿ, ಭಾರತೀಯ ನಾರಿಯರ ಬಗ್ಗೆ ಅವರಿಗಿದ್ದ ತಪ್ಪು ಅಭಿಪ್ರಾಯ ದೂರವಾಗುತ್ತದೆ. ಆಗ ರಮಾಬಾಯಿ ಪಡೆದುಕೊಳ್ಳುತ್ತಿದ್ದ ಸಾವಿರಾರು ಡಾಲರುಗಳ ಕಾಣಿಕೆಗೆ ಕುತ್ತು ಬಂತು.

ಸ್ವಾಮೀಜಿಯವರಿಗೆ ಎಲ್ಲರ ಬಗ್ಗೆಯೂ ಸಮಾನವಾದ ಭಾವವಿತ್ತು. ಅವರು ಎಲ್ಲ ಒಳ್ಳೆಯ ಕೆಲಸಗಳಿಗೂ ಒಂದೇ ರೀತಿಯ ಪ್ರೋತ್ಸಾಹ ಮತ್ತು ಬೆಂಬಲ ನೀಡುತ್ತಿದ್ದರು. ವಿಶೇಷವಾಗಿ ಮಹಿಳೆಯರಿಗಾಗಿ ಏನಾದರೂ ಉತ್ತಮ ಸೇವೆ ಮಾಡುತ್ತಿದ್ದರೆ (ಅದು ನಿಜವಾಗಲೂ ಸತ್ಕಾರ್ಯವಾಗಿದ್ದರೆ) ಖಂಡಿತ ಅಡಚಣೆ ಉಂಟುಮಾಡುತ್ತಿರಲಿಲ್ಲ, ಅದಕ್ಕೆ ಬದಲಾಗಿ ಅದನ್ನು ಕಂಡು ಆನಂದಪಡುತ್ತಿದ್ದರು. ಇಷ್ಟಾದರೂ ವಿವೇಕಾನಂದರು ಹೇಳಿದ ಸತ್ಯವಾಕ್ಯಗಳು ತಮ್ಮ ಹಣದ ಸರಬರಾಜಿಗೆ ಅಡಚಣೆ ತಂದಿವೆ ಎಂದು ಭಾವಿಸಿ, ರಮಾಬಾಯಿಯ ಪಂಗಡದವರು ಸ್ವಾಮೀಜಿಗೆ ಅತ್ಯಂತ ಅಸಹನೀಯವಾದ ಕಷ್ಟವನ್ನು ಕೊಟ್ಟರು. ಅವರು ನೀಡಿದ ತೊಂದರೆಗಳಿಗೆ ಕೊನೆಯೇ ಇರಲಿಲ್ಲ.

ಇದೆಲ್ಲ ನಡೆಯುವುದಕ್ಕೆ ಸುಮಾರು ಹದಿನೈದು ವರ್ಷಗಳ ಹಿಂದೆ, ಒಂದು ದಿನ ಶ್ರೀರಾಮಕೃಷ್ಣರು ಪ್ರತಾಪ ಎಂಬ ಬ್ರಹ್ಮಸಮಾಜದ ಭಕ್ತನ ಜೊತೆಗೆ ಮಾತನಾಡುತ್ತಿದ್ದರು.

**ಪ್ರತಾಪ್:** ಈ ದೇಶದ ಮಹಿಳೆಯರಲ್ಲಿ ಕೆಲವರು ವಿದೇಶಕ್ಕೆ ಹೋಗಿದ್ದಾರೆ. ಮಹಾರಾಷ್ಟ್ರದ ಓರ್ವ ಮಹಿಳೆ, ಬಹಳ ದೊಡ್ಡ ಪಂಡಿತೆ, ವಿದೇಶಕ್ಕೆ ಹೋಗಿದ್ದರು. ಆದರೆ ಈಗ ಅವರು ಕ್ರೈಸ್ತರಾಗಿದ್ದಾರೆ. ಮಹಾಶಯರೇ, ಆಕೆಯ ಹೆಸರನ್ನು ಕೇಳಿದ್ದೀರಾ?

**ಶ್ರೀರಾಮಕೃಷ್ಣರು:** "ಇಲ್ಲ, ಆದರೆ ನಿನ್ನ ಮಾತುಗಳನ್ನು ಕೇಳಿದ ನಂತರ ನನಗೆ ಅನ್ನಿಸುವುದೇನೆಂದರೆ ಆಕೆಗೆ ಕೀರ್ತಿಯ ಬಯಕೆಯಿದೆ. ಈ ರೀತಿಯ ಅಹಂಕಾರ ಸರಿಯಲ್ಲ. 'ನಾನು ಮಾಡುತ್ತೇನೆ' ಎಂಬುದು ಅಜ್ಞಾನದಿಂದ ಬರುತ್ತದೆ; 'ನೀನೇ ಕರ್ತೃ' ಎಂಬುದು ಜ್ಞಾನದಿಂದ ಬರುತ್ತದೆ. ಭಗವಂತನೇ ಕರ್ತೃ, ಮತ್ತೆಲ್ಲರೂ ಅಕರ್ತರೇ." (ಆಧಾರ: ಶ್ರೀರಾಮಕೃಷ್ಣ *ವಚನವೇದ*)

ಹೀಗೆ ಕೇವಲ ಕೆಲವೇ ವಾಕ್ಯಗಳಲ್ಲಿ ಶ್ರೀರಾಮಕೃಷ್ಣರು ರಮಾಬಾಯಿಯ ವ್ಯಕ್ತಿತ್ವವನ್ನು ಬಿಡಿಸಿ ಹೇಳಿಬಿಟ್ಟರು. ಅವರ ಮಾತುಗಳು ಮುಂದೆ ಅಕ್ಷರಶಃ ಸತ್ಯವಾದವು ಎಂದು ಮತ್ತೇನೂ ಹೇಳಬೇಕಿಲ್ಲ.

**೫. ಅಧರಲಾಲ ಸೇನರ ಬಗ್ಗೆ :** ಅಧರಲಾಲ ಸೇನ್ ಕಲ್ಕತ್ತಾದ ವಿಖ್ಯಾತ ಮ್ಯಾಜಿಸ್ಟ್ರೇಟ್ ಆಗಿದ್ದವರು; ಶ್ರೀರಾಮಕೃಷ್ಣರ ಭಕ್ತ. ಕೆಲಸದ ನಿಮಿತ್ತ ಅಲ್ಲಲ್ಲಿ ಹೋಗಬೇಕಾದಾಗ ಅಥವಾ ವಿಹಾರ ಮಾಡುವಾಗ, ಕುದುರೆ ಸವಾರಿ ಮಾಡುವುದು ಅವರ ಅಭ್ಯಾಸ. ಒಮ್ಮೆ ಶ್ರೀರಾಮಕೃಷ್ಣರು ಕುದುರೆ ಸವಾರಿ ಮಾಡುವುದನ್ನು ಬಿಟ್ಟುಬಿಡುವಂತೆ ಅಧರಲಾಲರಿಗೆ ಎಚ್ಚರಿಸಿದರು. ಆದರೆ ಅಧರಲಾಲರು ನಕ್ಕು ರಾಮಕೃಷ್ಣರ ಮಾತುಗಳನ್ನು ತಳ್ಳಿ ಹಾಕಿದರು. ಮೂರು, ನಾಲ್ಕು ತಿಂಗಳ ನಂತರ ಕುದುರೆಯಿಂದ ಬಿದ್ದು ಅವರ ಕೈ ಮುರಿಯಿತು. ಕೆಲವೇ ದಿನಗಳಲ್ಲಿ ಮರಣವೂ ಸಂಭವಿಸಿತು.